'ಅವರು ಗುಟ್ಟು ಮಾಡ್ತಾರೆ ಅಷ್ಟೇ... ಎರಡೂ ಡಿಪಾರ್ಟ್‌ಮೆಂಟ್‌ನಲ್ಲಿ ಸಾಕ್ಷಿಗಳು ಸಿಗೋದೇನೂ ಕಷ್ಟವಿಲ್ಲಾಂತ ಅನ್ನಿಸೋಲ್ವಾ?'

'ಊಹೂಂ... ನಂಗೆ ಹಾಗನ್ನಿಸ್ತಾಯಿಲ್ಲ. ನಾವ್ಯಾ ಯಾಕೆ ಪತ್ತೆ ಕಾರ್ಯ ಮಾಡಬಾರದು?'

'ಸದ್ಯ ಪರೀಕ್ಷೆಗೆ ಓದೋಣ... ಅವರವರ ಕೆಲಸ ಅವರೇ ಮಾಡಿದ್ರೆ ಚಂದ. ನಾನೇನು ಒಂದು ಲೋಟಾ ಕಾಫಿ ಮಾಡಿ ಕೊಡ್ತೀಯಾಂತ ಹೊಗಳಿದ್ರೆ... ನಿಜಾ ಅಂದ್ಕೊಂಡು ಬಿಟ್ಟೆಯಾ?' ಮೀರಾ ನಗುತ್ತಾ ಛೇಡಿಸಿದಳು.

'ನೀನು ಹೀಗೆ ನಗೋ ಬದಲು ಅತ್ತು ಬಿಡು ಮೀರಾ. ಪೊಲೀಸ್ನೋರ ಓಡಾಟ ನೋಡಿದ್ರೆ ಖಂಡಿತಾ ಸಾಕ್ಷಿ ಸಿಗುತ್ತಾಳೆ. ಧೈರ್ಯವಾಗಿರು' ಮಾನಸಿಯ ಹತ್ತಿರ ಬಂದು ಹೇಳಿದಳು. ಮೀರಾಳಿಗೆ ನಿಜಕ್ಕೂ ಅಳು ಬಂದು ಬಿಟ್ಟಿತು. 'ಮಾನಸಿ, ಅವಳೇನು ತಪ್ಪು ಮಾಡಿದ್ದಾಳೆಂದು ಈ ಶಿಕ್ಷೆ?' ಗದ್ಗದ ಕಂಠದಿಂದ ಕೇಳಿದಳು.

'ಏನೂ ಆಗಿಲ್ಲ... ಖಂಡಿತಾ ಸಿಗ್ತಾಳೆ. 'ನಾಪತ್ತೆ' ಅಂದ ಕೂಡಲೇ ಹೆದರಿ ಬಿಟ್ಟಿದ್ದೀಯಲ್ಲೇ? ಅದು ಪೊಲೀಸ್ ಭಾಷೆ ಅಷ್ಟೆ ಬಿಡು...' ಅವಳ ಕಣ್ಣೀರನ್ನೊರೆಸಲು ಮುಂದೆ ಬಂದಳು ಮಾನಸಿ.

'ಛೀ! ದೂರ ಹೋಗೇ ಪೋಸ್ಟ್ ಮಾರ್ಟಂ ಹಾಲ್‌ನ ವಾಸನೆನೇ ಬರ್ತಾಯಿದೆ...' ಮೃದುವಾಗಿ ಮೀರಾ ಅವಳನ್ನು ದೂರ ತಳ್ಳಿದಳು. ಮಾನಸಿ ನಗುತ್ತಾ ಸ್ನಾನಕ್ಕೆಂದು ಟವಲ್ ಬಟ್ಟೆ ಹಿಡಿದು ಓಡಿದಳು.

★★★

ಇನ್‌ಸ್ಪೆಕ್ಟರ್ ಕುಲಕರ್ಣಿ ಅನಾಟಮಿ ವಿಭಾಗಕ್ಕೆ ಸಿಬ್ಬಂದಿಯೊಂದಿಗೆ ಬಂದಿಳಿದರು. ಪ್ರೊಫೆಸರ್ ಇಳಂಗೋವನ್ ಅವರಿಗೆ ಪ್ರಿನ್ಸಿಪಾಲ್ ವಿಷಯ ತಿಳಿಸಿದ್ದರು. ಇಳಂಗೋವನ್ ಅವರು, 'ಆ ಹುಡುಗಿ ನನ್ನ ಡಿಪಾರ್ಟ್‌ಮೆಂಟ್‌ಗೆ ಯಾಕೆ ಬರ್ತಾಳೆ? ಬಂದಿದ್ದರೂ ನೋಡಿಕೊಂಡು, ಶಿವಾನಂದ್ ಇಲ್ಲದ್ದರಿಂದ ಹೋಗಿರ್ತಾಳೆ; ಆ ವಿಷಯ ಯಾಕೆ ದೊಡ್ಡದು ಮಾಡ್ತೀರಾ?' ಅಸಮಾಧಾನದಿಂದ ಹೇಳಿದರು.

'ಆ ಹುಡುಗಿ ಮೊಬೈಲ್ ನಂಬರನ್ನು ಸರ್ವಿಲೆನ್ಸ್ ಮಾಡಿದ್ದಾರೆ. ಆ ನಂಬರ್ ನಿಮ್ಮ ಡಿಪಾರ್ಟ್‌ಮೆಂಟ್ ತೋರಿಸಿತಂತೆ. ನಂತರ ಮೊಬೈಲ್ ರಿಂಗಾಗುತ್ತಿರಲಿಲ್ಲವಂತೆ. ನೋಡಲಿ ಬಿಡಿ. ಏನಾಗುತ್ತೆ? ನೀವು ಸಹಕರಿಸಿ ಅಷ್ಟೆ ಪ್ಲಿಸ್' ಎಂದು ಮೃದುವಾಗಿ ಹೇಳಿದರೂ ಆಜ್ಞಾಪೂರ್ವಕವಾಗಿತ್ತು.

ಇಳಂಗೋವನ್ ಅಸಹನೆಯಿಂದಲೇ ಎದ್ದು ಹೋಗಿದ್ದರು. ಇನ್‌ಸ್ಪೆಕ್ಟರ್ ಕುಲಕರ್ಣಿ ತಮ್ಮ ಇಬ್ಬರು ಕಾನ್‌ಸ್ಟೆಬಲ್ ಜೊತೆ ಅನಾಟಮಿ ವಿಭಾಗಕ್ಕೆ ಬಂದಿಳಿದರು. ಅವರು ಆಣತಿಯಂತೆ ಎಲ್ಲವನ್ನೂ ತೋರಿಸುತ್ತಾ ಬಂದರು.

ಅನಾಟಮಿ ಹಾಲಿನಲ್ಲಿ ಹತ್ತು ದೊಡ್ಡ ಟೇಬಲ್‌ಗಳನ್ನು ಹಾಕಿದ್ದರು. ಫಾರ್ಮಾಲಿನ್ ದ್ರಾವಣದ ಘಾಟಿನಿಂದ ಎಲ್ಲರ ಕಣ್ಣುಗಳಲ್ಲಿ ಉರಿ ಕಾಣಿಸಿಕೊಂಡು ನೀರು ಬರುವಂತಾಯಿತು. ಫಾರ್ಮಾಲಿನ್ ದ್ರಾವಣ ತುಂಬಿದ್ದ ಅತಿ ದೊಡ್ಡ ಟ್ಯಾಂಕ್‌ನಲ್ಲಿ ಕರಕಲಾದ, ಛೇದಿಸಿದ್ದ ಶವಗಳನ್ನು ಕೆಡದಂತೆ ಹಾಕಲಾಗಿತ್ತು. ದೊಡ್ಡ ಕಬ್ಬಿಣದ ರಾಡ್‌ನ ಕೊಂಡಿಯಂತಿದ್ದ ಭಾಗದಿಂದ ಡಿಸೆಕ್ಷನ್ ವೇಳೆಗೆ ಟೇಬಲ್ಲಿನ ಮೇಲೆ ಶವಗಳನ್ನು ಅದರಿಂದ ಎಳೆದು ತಂದು ಹಾಕುತ್ತಿದ್ದರು. ಆ ದಿನ ಹನ್ನೆರಡು ಗಂಟೆಗೇ ತರಗತಿ ಮುಗಿದು ಹೋದುದರಿಂದ ವಿದ್ಯಾರ್ಥಿಗಳಿರಲಿಲ್ಲ. ಸಿಬ್ಬಂದಿ ವರ್ಗದವರಿದ್ದರು. ಎಲ್ಲವನ್ನೂ ವೀಕ್ಷಿಸಿದ ಇನ್‌ಸ್ಪೆಕ್ಟರ್ ಕುಲಕರ್ಣಿ, 'ಮ್ಯೂಸಿಯಂ ಎಲ್ಲಿದೆ?' ಎಂದು ಕೇಳಿದರು.

'ಮಹಡಿ ಮೇಲಿದೆ...' ಎಂದು ಇಳಂಗೋವನ್ ತಮ್ಮ ಲೆಕ್ಚರರ್ ಒಬ್ಬರನ್ನು ಕರೆದು, 'ಇವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ' ಎಂದು ಹೇಳಿ, ಇನ್‌ಸ್ಪೆಕ್ಟರ್ ಕಡೆ ತಿರುಗಿ, 'ಇವರು ತೋರಿಸ್ತಾರೆ,